# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 564 (510) |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-02-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ಮಹಾನಗರಪಾಲಿಕೆಯ ಸುರತ್ಕಲ್‌ನಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಇದುವರೆಗೂ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನ ಎಷ್ಟು; | 2017-18ನೇ ಸಾಲಿನಲ್ಲಿ ಸುರತ್ಕಲ್ ಮಾರುಕಟ್ಟೆಗೆ ಹಂಚಿಕೆಯಾದ ಎಸ್‌ಎಫ್‌ಸಿ ವಿಶೇಷ ಅನುದಾನ ರೂ.50.00 ಕೋಟಿ, 2016-17ನೇ ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನ ರೂ.1.00 ಕೋಟಿ, ಉದ್ದೇಶಿತ ಮಾರುಕಟ್ಟೆ ಸಂಕೀರ್ಣದ ಮಳಿಗೆಗಳಿಂದ ನಿರೀಕ್ಷಿಸಲಾದ ಠೇವಣಿ ಮೊತ್ತದಿಂದ ಅಥವಾ ಮಹಾನಗರಪಾಲಿಕೆಯ ಸ್ವಂತ ನಿಧಿಯಿಂದ ರೂ.10.00 ಕೋಟಿ, ಮಂಗಳೂರು ಮಹಾನಗರಪಾಲಿಕೆ ಅನುದಾನ ರೂ.21.00 ಕೋಟಿ ಒಟ್ಟು ಹಂಚಿಕೆಯಾದ ಅನುದಾನ ರೂ.82.00 ಕೋಟಿಗಳು.<br>ಈ ಹಂಚಿಕೆಯಾದ ಅನುದಾನದಲ್ಲಿ 2017-18ನೇ ಸಾಲಿನಲ್ಲಿ ರೂ.15.00 ಕೋಟಿ ಮತ್ತು 2019-20ನೇ ಸಾಲಿನಲ್ಲಿ ರೂ.5.00 ಕೋಟಿ ಒಟ್ಟು ರೂ.20.00 ಕೋಟಿ ಬಿಡುಗಡೆಯಾಗಿರುತ್ತದೆ. ಸುರತ್ಕಲ್ ಮಾರುಕಟ್ಟೆಗೆ ಇಲ್ಲಿಯವರೆಗೆ ವೆಚ್ಚವಾದ ಮೊತ್ತ ರೂ.16.75 ಕೋಟಿಗಳಾಗಿರುತ್ತದೆ. |
| (ಆ) | ಮಾರುಕಟ್ಟೆ ಕಾಮಗಾರಿಯ ಪ್ರಗತಿ ಹಂತದ ಕುರಿತು ವರ್ಷವಾರು ವಿವರ ನೀಡುವುದು; | • ದಿನಾಂಕ:20-03-2018 ರಂದು ಸುರತ್ಕಲ್ ಮಾರುಕಟ್ಟೆ ಕಾಮಗಾರಿಯ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಲಾಗಿರುತ್ತದೆ.<br>• 2018ನೇ ಸಾಲಿನಲ್ಲಿ Earth work and Footing ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.<br>• 2019-20 ನೇ ಸಾಲಿನಲ್ಲಿ ಮಾರುಕಟ್ಟೆಯ ವಿವಿಧ ಭಾಗಗಳಲ್ಲಿ Column, Pillar and Slab ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.<br>• ತದನಂತರ ದಿನಾಂಕ: 30-06-2020 ರಂದು ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದ್ದು, ಬಾಕಿ ಉಳಿದ ಕಾಮಗಾರಿಯನ್ನು ಚಾಲ್ತಿ ದರಪಟ್ಟಿಯಂತೆ ಹೊಸದಾಗಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಲು ಆದೇಶ ಸಂಖ್ಯೆ: ನಅಇ 446 ಎಸ್‌ಎಫ್‌ಸಿ 2021 ದಿನಾಂಕ: 31-12-2022 ರಲ್ಲಿ ಆದೇಶಿಸಲಾಗಿರುತ್ತದೆ. |
| (ಇ) | ರೂ.61 ಕೋಟಿ ಹಣ ಬಿಡುಗಡೆಯಾಗಿದ್ದರೂ ಇದುವರೆಗೂ ರೂ.18 ಕೋಟಿ ಮಾತ್ರ ವೆಚ್ಚವಾಗಿದ್ದು ಉಳಿಕೆ ಅನುದಾನವನ್ನು ಯಾವಾಗ ವೆಚ್ಚ ಮಾಡಲಾಗುವುದು; | ಸುರತ್ಕಲ್ ಮಾರುಕಟ್ಟೆಯ ಉಳಿದ ಕಾಮಗಾರಿಗೆ ರೂ.65.25ಕೋಟಿಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:16-06-2023 ರಂದು ಆರ್ಥಿಕ ಬಿಡ್ ತೆರೆಯಲಾಗಿರುತ್ತದೆ. ಸದರಿ ಆರ್ಥಿಕ ಬಿಡ್‌ಗೆ ಅನುಮೋದನೆ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| (ಈ) | ಉಳಿಕೆಯಾದ ರೂ.43 ಕೋಟಿ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ವೆಚ್ಚ ಮಾಡಲಾಗುವುದು? | ಉಳಿಕೆ ರೂ.65.25 ಕೋಟಿಗಳನ್ನು ಮಾರುಕಟ್ಟೆಯ ಸಿವಿಲ್ ಕಾಮಗಾರಿ, ವಿದ್ಯುದ್ದೀಕರಣ, ಜನರೇಟರ್ ವರ್ಕ್, ಸಿ.ಸಿ.ಟಿವಿ ವರ್ಕ್, ಪ್ಲಂಬಿಂಗ್ ಮತ್ತು ಸ್ಯಾನಿಟರಿ, ಫೈರ್ ಫೈಟಿಂಗ್ ಹಾಗೂ ಇತರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವೆಚ್ಚ ಮಾಡಲಾಗುವುದು. |

ಸಂಖ್ಯೆ:ನಅಇ 59 ಎಸ್‌ಎಫ್‌ಸಿ 2024

21/02/2024

**(ಬಿ.ಎಸ್ ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ

ಸಚಿವರು